ಸಂಸ್ಥೆಯಿಂದ ತರಬೇತಿ ನೀಡಿದಾಗ ಬೇರೆ ಯಾರೂ ಗ್ರಾಮದಿಂದ ತರಬೇತಿಗಾಗಿ ಮುಂದೆ ಬರಲಿಲ್ಲ.

ಸದರಿ ಗುತ್ತಿಗೆದಾರರು ಕೆರೆಯನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ. ಅದಕ್ಕಾಗಿ ಒಂದು ಚಿಕ್ಕ ತೊಟ್ಟಿಯನ್ನು ಕೆರೆಯ ಸಮೀಪದಲ್ಲಿ ಕಟ್ಟಿರುತ್ತಾರೆ.

ಈಗ ಮಿಾನುಗಾರಿಕೆ ಅಭಿವೃದ್ಧಿಗಾಗಿ ಕೆರೆಯಲ್ಲಿ ಕೋಳಿ ಗೊಬ್ಬರ, ಸಗಣಿ ಮತ್ತು ರಾಸಾಯನಿಕ ಗೊಬ್ಬರವನ್ನು ಹಾಕಿರುತ್ತಾರೆ. ಆದ್ದರಿಂದ ನೀರಿನಲ್ಲಿ ಬದಲಾವಣೆ ಆಗುವುದು ಸಹಜ.

ಸದರೀ ಗ್ರಾಮದಲ್ಲಿ ಇರುವುದು ಇದೊಂದೆ ಕೆರೆಯಾದ್ದರಿಂದ ಈ ಸಮಸ್ಯೆಯುಂಟಾಗಿದೆ. ಇದರಿಂದಾಗಿ ದನಕರುಗಳು ಸತ್ತಿರುವುದು, ಜನರಿಗೆ ಕಿರುಕುಳ ಉಂಟಾಗಿರುವುದು ನಮ್ಮ ಗಮನಕ್ಕೆ ಬಂದಿರುವುದಿಲ್ಲ, ಇದರ ಬಗ್ಗೆ ವಿಚಾರಿಸಲಾಗುವುದು.

ಈ ಪ್ರಯುಕ್ತವಾಗಿ ಈ ಕೆರೆಯ ಬಗ್ಗೆ ಗುತ್ತಿಗೆದಾರರು ಮತ್ತು ಗ್ರಾಮಸ್ಥರ ನಡುವೆ ಹೊಂದಾಣಿಕೆ ತರಲು ಮಿಾನು ಕೃಷಿಕರ ಅಭಿವೃದ್ಧಿ ಸಂಸ್ಥೆಗೆ ತಿಳಿಸಲಾಗುವುದು.

ಸಂಬಂಧಪಟ್ಟ ಮಿಾನುಗಾರಿಕೆ ವಿಸ್ತರಣಾಧಿಕಾರಿಯನ್ನು ವರ್ಗಾವಣೆ ಮಾಡಲು ಪರಿಶೀಲಿಸಲಾಗುವುದು.

ಓ) ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರಿ ಸಂಘಗಳ ಸಾಲಗಳವಸೂಲಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ

6 ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರ ಸಂಘಗಳ ಸಾಲಗಳ ವಸೂಲಿಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ

ಶ್ರೀ ಸಿ. ಎಂ. ರೇವಣ್ಣಸಿದ್ದಯ್ಯ.—ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದ ಸಹಕಾರಿ ಸಾಲಗಳ ವಸೂಲಿಗಾಗಿ ರೈತರ ಭೂಮಿಯನ್ನು ಜಿಲ್ಲೆಯ ಡಿ.ಸಿ. ಯವರೇ ಯಾಲಂ ಮಾಡಿ ಸರ್ಕಾರದ ಸ್ವಾಧೀನ ಮಾಡಿಕೊಂಡಿರುವರು. ರೈತ ಸಂಘದ ಬೇಡಿಕೆಯನ್ನು ಮನ್ನಿಸಿ ೧೯೮೫ರಲ್ಲಿ ಸರ್ಕಾರವು ಬಾಕಿ ಇದ್ದ ರೈತ ತನ್ನ ಸಾಲ ಪೂರಾ ಕಟ್ಟಿದಿದ್ದಲ್ಲಿ ಆತನ ಭೂಮಿಯನ್ನು ವಾಪಸ್ಸು ಕೊಡಲು ಆಜ್ಞೆ ಹೊರಡಿಸಿದೆ.

ಆ ಪ್ರಕಾರ ರೈತರು ತಮ್ಮ ಬಾಕಿ ಮೊತ್ತ ಕಟ್ಟಿ ಜಿಲ್ಲಾಧಿಕಾರಿಗಳಿಗೆ ತಮ್ಮ ಭೂಮಿಯನ್ನು ವಾಪಸ್ಸು ಬಿಡಲು ಅರ್ಜಿ ಹಾಕಿ ಒಂದು ವರ್ಷ ಮೀರಿ ಹೋಗಿದೆ ಆದರೂ ಭೂಮಿಗಳನ್ನು ವಾಪಸ್ಸು ಬಿಡುವ ಆರ್ಡರ್ ಆಗಿಲ್ಲ. ಇದರಿಂದ ಬಡ ರೈತರಿಗೆ ತೀರಲಾರದ, ಸಹಿಸಲಾರದ ತೊಂದರೆಯಾಗಿದೆ. ಪ್ರಯುಕ್ತ ಮಾನ್ಯ ಕಂದಾಯ ಮಂತ್ರಿಗಳು ಕಂದಾಯ ಕಮೀಷನ್‌ರವರ ದ್ವಾರ ರೈತರಿಗೆ ತಕ್ಷಣ ಭೂಮಿ ಸ್ವಾಧೀನಪಡಿಸುವ ಆಜ್ಞೆ ಕಳುಹಿಸಲು ಸಲಹೆ ಮಾಡುತ್ತೇನೆ. ತಡವಾದರೆ ತೀರಲಾರದ ನಷ್ಟ ವಾಗುತ್ತದೆಂದು ಈ ಮೂಲಕ ತಿಳಿಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಕಾನೂನು ಪ್ರಕಾರ ಅರ್ಹರಾದ ರೈತರಿಗೆ ಭೂಮಿ ಕೊಡಲಿಕ್ಕೆ ಕೂಡಲೇ ಆದೇಶ ಕೊಡುತ್ತೇನೆ.

7 ಮಧುಗಿರಿ ತಾಲ್ಲೂಕಿನ ಕೊಚಗೇನಹಳ್ಳಿ ಗ್ರಾಮದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ನೌಕರ ಶ್ರೀ ಕೆ. ನರಸೆಂಹಯ್ಯ ಎಂಬುವರನ್ನು ಕೊಲೆ ಮಾಡಿರುವ ವ್ಯಕ್ತಿಯನ್ನು ಬಿಡುಗಡೆ ಮಾಡಿರುವ ಬಗ್ಗೆ

ಶ್ರೀ ಎಸ್. ಬಂಗಾರಪ್ಪ. —ದಿನಾಂಕ ೮-೪-೧೯೮೫ರಂದು ಮಧುಗಿರಿ ತಾಲ್ಲೂಕಿನ ಕೊಡಿಗೇನ ಹಳ್ಳಿ ಗ್ರಾಮದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ನೌಕರರಾಗಿದ್ದ ಶ್ರೀ ಕೆ. ನರಸಿಂಹಯ್ಯ ಎಂಬುವರ ಕೊಲೆಯಾಗಿದ್ದು ಸಂಬಂಧಪಟ್ಟ ಆರೋಪಿಯನ್ನು ವಿಚಾರಣೆಗೊಳಪಡಿಸಲಾಗಿದೆ ಹಾಗೂ ಈ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಆದರೆ ಈ ಕೊಲೆಯ ಸಂಬಂಧ ಗ್ರಾಮದಲ್ಲಿ ಉಂಟಾದ ಗಲಭೆಯ ಪರಿಣಾಮವಾಗಿ ಕೆಲವು ಮುಗ್ಧ ಹರಿಜನರ ವಿರುದ್ಧ ಕೇಸು ದಾಖಲಾಗಿದ್ದು ಅವರು ಮಾತ್ರ ಕೋರ್ಟು ಕಛೇರಿಗಳಿಗೆ ಅಲೆಯುವಂತಾಗಿದೆ. ಮೊಕದ್ದಮೆಗೊಳಲಾದ ಹರಿಜನರು ಈ